## <u>11 ನೇ ಅಪರ ಮುಖ್ಯ ನ್ಯಾಯಾಂಗ ದಂಡಾಧಿಕಾರಿಗಳ ನ್ಯಾಯಾಲಯ</u>
## <u>ಬೆಂಗಳೂರು ನಗರ</u>

**<u>ಸಿ.ಸಿ.ನಂ. 51979-2022</u>**

| | | | | |
|---|---|---|---|---|
| ಪಿರ್ಯಾದುದಾರರು<br>ರಾಜ್ಯ ಪರ | ಃ | | | ಆರ್. ಎಂ ನಗರ ಪೋಲೀಸ್ ಠಾಣೆ<br>ಬೆಂಗಳೂರು ನಗರ |
| | | ವಿರುದ್ಧ | | |
| ಆರೋಪಿಗಳು | | | ಆಃ | ಪ್ರಸಾರ್ ವೈಸ ಮತ್ತು ಇತರರು |

ಃ **<u>ದೋಷಾರೋಪಣೆಃ</u>**

ಸರವಣನ್. ಎಸ್ ಬಿ.ಬಿಎ., ಎಲ್‌ಎಲ್.ಬಿ., 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ಆದ ನಾನುಃ

ಆ.1 ಃ ಪ್ರಸಾರ್ ವೈಸಾ ಉಃ ಪ್ರಸಾರ್ ರುಜುಲಾಲ್ ವೈಸಾ
ಬಿನ್ ರುಜುಲಾಲ್ ಪ್ರಾಣ್ ಶಂಕರ್ ವೈಸಾ, 28 ವರ್ಷ,
ನಂಃ ವ 402, ಎನ್ ಕ್ಲೇವ್ ಎನ್.ಆರ್.ಐ ಲೇಔಟ್, ಬೆಂಗಳೂರು.

**<u>ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸಿರುತ್ತೇನೆ.</u>**

ಒಂದನೇ ಆರೋಪಿಯಾದ ನಿಮಗೂ ಮತ್ತು ಸಾಕ್ಷಿ-**01** ರವರು ಪ್ರೀತಿಸುತ್ತಿದ್ದು, ದಿನಾಂಕಃ **28.02.2016** ರಂದು ಹಿಂದು ಸಂಪ್ರದಾಯದಂತೆ ಮದುವೆ ಮಾಡಿಕೊಟಿದ್ದು, ನಂತರ ಸಾಕ್ಷಿ-**1** ರವರು ಬೆಂಗಳೂರು ನಗರ ರಾಮಮೂರ್ತಿನಗರ ಪೋಲೀಸ್ ಠಾಣೆಯ ಸರಹದ್ದಿನ ಗೋಪಾಲಪ್ಪ ಲೇಔಟ್ ನ ಎನ್.ಆರ್.ಐ. ಬಡಾವಣೆಯ ಗಾಯತ್ರಿ ಎನ್ ಕ್ಲೇವ್ ಅಪಾರ್ಟ್ ಮೆಂಟ್ ಮನೆ ನಂಃ **402** ರಲ್ಲಿ ವಾಸವಾಗಿದ್ದು, ಒಂದನೇ ಆರೋಪಿಯಾದ ನಿಮ್ಮ ಜೊತೆ ವಾಸವಾಗಿದ್ದು, ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಗಲಾಟೆ ಮಾಡಿ ಸಾಕ್ಷಿ-**1** ರವರಿಗೆ ಕಿರುಕುಳ ನೀಡಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕ್ರೌರ್ಯಕ್ಕೆ ಒಳಪಡಿಸಿ ಆ ಮೂಲಕ ಭಾ.ದಂ.ಸ ಕಲಂ **498(ಎ)** ಸಹವಾಚಕ **34** ರಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-**1** ರವರಿಗೆ ಮದುವೆಗೆ ಸಂಬಂಧಪಟ್ಟಂತೆ ವರದಕ್ಷಿಣೆಯಾಗಿ ಚಿನ್ನಾಭರಣ, ನಗದು ಹಣ ಮತ್ತು ಮುಂತಾದ ಗೃಹೋಪಯೋಗಿ ವಸ್ತುಗಳನ್ನು ಪಡೆದುಕೊಂಡು ಆ ಮೂಲಕ ನೀವು ವರದಕ್ಷಿಣೆ ನಿಷೇಧ ಕಾಯ್ದೆ ಕಲಂ **3** ರಡಿಯಲ್ಲಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಆರೋಪಿಯಾದ ನೀವುಗಳು ಸಾಕ್ಷಿ-**1** ರವರ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆಯನ್ನು ತೆಗೆದುಕೊಂಡು ಬಾ ಎಂದು ಆ ಮೂಲಕ ವರದಕ್ಷಿಣೆ ನಿಷೇಧ

ಕಾಯ್ದೆ ಕಲಂ **4** ರಡಿಯಲ್ಲಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ ಆರೋಪಿಯಾದ ನೀವುಗಳು ಸಾಕ್ಷಿ-**1** ರವರಿಗೆ ಕೈಗಳಿಂದ ಹೊಡೆದು ಹಲ್ಲೆ ಮಾಡಿ ಆ ಮೂಲಕ ಭಾ.ದಂ.ಸ ಕಲಂ **323** ಸಹವಾಚಕ **34** ರಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಐದನೇಯದಾಗಿ ಆರೋಪಿಯಾದ ನೀವುಗಳು ಸಾಕ್ಷಿ-**01** ರವರಿಗೆ ಮತ್ತು ಅವರ ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಆ ಮೂಲಕ ಭಾ.ದಂ.ಸ ಕಲಂ **504** ಸಹವಾಚಕ **34** ರಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಆರೋಪಿಯಾದ ನೀವುಗಳು ಸಾಕ್ಷಿ-**01** ರವರಿಗೆ ಜೀವ ಬೆದರಿಕೆ ಹಾಕಿ ಆ ಮೂಲಕ ಭಾ.ದಂ.ಸ ಕಲಂ **506** ಸಹವಾಚಕ **34** ರಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

*ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.*

(ಸರವಣನ್.ಎಸ್)

ದಿನಾಂಕಃ - -2024. 11 ನೇ ಅಪರ ಮುಖ್ಯ ನ್ಯಾಯಾಂಗ ದಂಡಾಧಿಕಾರಿ,

ಬೆಂಗಳೂರು.

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತೇ ?
ಉತ್ತರಃ ಆ-1

ಪ್ರ 2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುತ್ತೀರಾ? ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?
ಉತ್ತರಃ ಆ-1

*(ಮೇಲ್ಕಾಣಿಸಿದ ಆರೋಪಿಗಳಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರಗಳನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)*

11 ನೇ ಅಪರ ಮುಖ್ಯ ನ್ಯಾಯಾಂಗ ದಂಡಾಧಿಕಾರಿಗಳು,

ಬೆಂಗಳೂರು ನಗರ.